International Journal of Kannada Research
www.kannadajournal.com

ISSN: 2454–5813
IJKR 2020; 6(1): 28-30
© 2020 IJKR
www.kannadajournal.com
Received: 16-11-2019
Accepted: 18-12-2019

**ಮಂಜುನಾಥ.ಆರ್.**
ಮಂಜುನಾಥ.ಆರ್.
ಸಂಶೋಧನಾ ವಿದ್ಯಾರ್ಥಿ
ಕರ್ನಾಟಕ ಜಾನಪದ
ವಿಶ್ವವಿದ್ಯಾಲಯ
ಗೊಟಗೋಡಿ ಹಾವೇರಿ ಜಿಲ್ಲೆ-581197

Corresponding Author:
**ಮಂಜುನಾಥ.ಆರ್.**
ಮಂಜುನಾಥ.ಆರ್.
ಸಂಶೋಧನಾ ವಿದ್ಯಾರ್ಥಿ
ಕರ್ನಾಟಕ ಜಾನಪದ
ವಿಶ್ವವಿದ್ಯಾಲಯ
ಗೊಟಗೋಡಿ ಹಾವೇರಿ ಜಿಲ್ಲೆ-581197

# ತಮಿಳು ಪ್ರಾಚೀನ ಜನಪದ ಸಾಹಿತ್ಯದಲ್ಲಿ ಮಾತೃದೇವತ ಆಚರಣೆಯ ಕುರುಹು

**ಮಂಜುನಾಥ.ಆರ್.**

ಪ್ರಪಂಚದ ಇತಿಹಾಸದಲ್ಲಿ ಮಾತೃ ದೈವದ ಆರಾಧಾನೆ ಎಂಬುದು ಆರಂಭದ ಆಚರಣೆಯಾಗಿದೆ. ಇದಕ್ಕೆ ಪೂರಕವಾದ ಆಧಾರಗಳು ಶಿಲಾಯುಗದ ಆರಂಭದಿಂದಲೆ ದೊರೆಯುತ್ತದೆ. ದ್ರಾವಿಡ ನಾಗರಿಕತೆ ಎಂದು ಕರೆಯಲ್ಪಡುವ ಮಹೇಂಜೋದಾರ, ಹರಪ್ಪ, ಗಂಗಾ ನದಿಯಿಂದಲೆ ದೊರೆಯಲು ಆರಂಭವಾಗುತ್ತದೆ. ಈ ಸ್ಥಳದಲ್ಲಿ ದೊರೆಯುವ ಮುದ್ರೆಯೊಂದರಲ್ಲಿ, ಸಂತಾನೋತ್ಪತ್ತಿ ಉತ್ಪತ್ತಿ ಹೆಣ್ಣಿನ ಕುಲದ ಕರ್ತವ್ಯ ಎಂಬುದನ್ನು ಸಾಬಿತು ಪಡಿಸುವ ಬಗೆಯಲ್ಲಿ ವಸ್ತ್ರವಿರದ ಹೆಣ್ಣಿನ ರೂಪ ತಲೆಕೆಳಗಾಗಿ ತೋರಿಸಲಾಗಿದೆ ಅದರಗರ್ಭದಿಂದ ಒಂದು ಸಸ್ಯವೊಂದು ಹೊರಗೆ ಬರುವಂತೆ ಅದರ ಪಕ್ಕದಲ್ಲಿ ನೇಗಿಲ ರೀತಿಯಲ್ಲಿರುವ ವಸ್ತುವೊಂದುನ್ನು ಕೈಯಲ್ಲಿ ಹಿಡಿದಿರುವ ಗಂಡಿನ ರೂಪವನ್ನು ತೋರಿಸಲಾಗಿದೆ.1 ದೃಶ್ಯವನ್ನು ನೋಡಬಹುದಾಗಿದೆ. ಹೆಣ್ಣು ಫಲವಂತಿಕೆಯ ಪ್ರತೀಕ ಎಂಬ ನಂಬಿಕೆಯನ್ನು ಆಧಾರಿಸಿಯೇ ಭಾರತೀಯ ಭೂಮಿಯಲ್ಲಿ ಹೆಣ್ಣು ದೈವದ ಆರಾಧನೆ ಆರಂಭವಾಯಿತು. ಭಾರತೀಯ ನಾಗರಿಕತೆಯು, ನಂಬಿಕೆಗಳು ಗ್ರಾಮೀಣ ಪ್ರದೇಶಗಳಲ್ಲಿ ಉದಯಿಸಿ ಬೇಳೆಯುತ್ತದೆ.ಎಂಬ ಒಂದುಊಕ್ತಿಯು ಪ್ರಸ್ತುತಅನೇಕರ ಅಭಿಪ್ರಾಯಗಳಲ್ಲಿ ನೈಜತೆಯನ್ನು ಹೊಂದಿರುವುದು ನೋಡಬಹುದು.ಪ್ರಪಂಚದ ನಾಗರಿಕತೆಯ ನದಿ ಪ್ರದೇಶದಲ್ಲಿಉಗಮವಾಯಿತು.ಆ ದಿಸೆಯಲ್ಲಿ ಅನೇಕ ದೇವತೆಗಳ ಉಗಮವು ಮತ್ತು ಅವುಗಳ ಬೆಳವಣಿಗೆ ಆರಾಧನೆಯು ಗ್ರಾಮಗಳಲ್ಲಿ ಬೆಳೆಯುತ್ತಲೆ ಬಂದಿದೆ. ಜನಪದ ದೇವತೆಗಳಿಲ್ಲದ ಗ್ರಾಮ ಯಾವುದೂ ಇಲ್ಲ. ಈ ದೇವತೆಗಳ ಪ್ರೀತಿಗಾಗಿ ಪೂಜೆ, ಜಾತ್ರೆ, ಉತ್ಸವಗಳನ್ನು ನಡೆಸದ ಜನಪದರಿಲ್ಲ. ಗ್ರಾಮವನ್ನು ಕಾಪಡುವ ದೇವತೆಯ ಆಲಯಊರಿನ ಹೊರಭಾಗದ ಗಡಿಯಲ್ಲಿರುತ್ತದೆ. ಅಲ್ಲಿದ್ದು ಗ್ರಾಮವನ್ನು ಆ ದೇವತೆ ರಕ್ಷಿಸುತ್ತಾ ಇರುವಳೆಂದು ನಂಬಿಕೆ.ಗ್ರಾಮದೇವತೆಗೆ ಕಡ್ಡಾಯವಾಗಿ ಬಲಿಕೊಡಬೇಕು ಎಂಬ ಅಭಿಪ್ರಾಯವಿದೆ. ಬಲಿಯ ಆಚರಣೆಗಳನ್ನು ಆಧುನಿಕ ಕಾಲದಲ್ಲಿ ನಿಷೇಧಿಸಿದ್ದರೂ ಯಾವುದೋ ಒಂದು ರೂಪದಲ್ಲಿ ಇದ್ದೇ ಇರುತ್ತವೆ. ಆ ಮಟ್ಟಕ್ಕೆ ಬಲಿಗಳು ಜನಪದರ ಜೀವನದ ಭಾಗವಾಗಿ ಹೋಗಿವೆ.

ಜನಪದ ದೇವರುಗಳು ಎಂಬುದುಒಂದೋಂದು ಗ್ರಾಮಗಳಿಗೆ ಪ್ರತ್ಯಕೆವಾದ ದೇವತೆಗಳು, ಒಂದು ನಿರ್ದಿಷ್ಟ ಕಾರ್ಯಗಳನ್ನು ಪರಿಹರಿಸುವ ಸಲುವಾಗಿ ಒಂದುದೇವರನ್ನು, ಕೆಟ್ಟ ಶಕ್ತಿಗಳಿಂದಲು ರೋಗಗಳಿಂದಲು ರಕ್ಷಿಸಲುಒಂದುದೇವರುಎಂದು ಅನೇಕ ಮೂಲಭೂತ ಕಾರಣಗಳು ಕೊಂಡಅಸಂಖ್ಯಾತರು ಸಾರ್ವತ್ರಿಕವಾಗಿ ಆಚರಿಸಿಕೊಂಡು ಬಂದಿದ್ದಾರೆ.ಈರೀತಿಯ ಅನೇಕ ದೇವರುಗಳು ಇರುವಾಗಜನಪದ ದೇವತೆಗಳು ಎಂಬ ಸಾಲಿನಲ್ಲಿಗಂಡುದೇವರಿಗಿಂತ, ಹೆಣ್ಣುದೇವರುಗಳನ್ನು ಬಹುಸಂಖ್ಯೆಯಲ್ಲಿ ನೋಡವುದರೋಂದಿಗೆ ಅವುಗಳು ಆದ್ಯತೆಯನ್ನುಆರಂಭದಲ್ಲೆ ಪಡೆದವು ಎಂಬ ಪ್ರಖ್ಯಾತಿಪಡೆದವಾಗಿದೆ.ಗ್ರಾಮದೇವತೆಗಳೇ. ಪುರುಷ ದೇವತೆಗಳು ತುಂಬ ಕಡಿಮೆ.ಒಂದು ವೇಳೆ ಇದ್ದರೂ ಸ್ತ್ರೀ ದೇವತೆಗಳ ಸೋದರರೊ, ಗಂಡಂದಿರೊ, ಬಂಧುಗಳೊ ಆಗಿರುತ್ತಾರೆ.ಆರ್ಯದೇವತೆಗಳಲ್ಲಿ ಹೆಚ್ಚು ಮಂದಿ ಪುರುಷರಾಗಿರುವುದು, ಗ್ರಾಮದೇವತೆಗಳು ಹೆಚ್ಚು ಸ್ತ್ರೀಯರಾಗಿರುವುದು ಸಾಕಷ್ಟು ಚರ್ಚೆಗೆದಾರಿಯಾಗಿದೆ. ವಿದ್ವಾಂಸರು ಅನೇಕ ಕಾರಣಗಳನ್ನು ಹೇಳಿದ್ದರ ಯಾವುದೂತೃಪ್ತಿಕರವಾಗಿಲ್ಲ.ಕೆಲವರ ಪ್ರಕಾರ ಪ್ರಪಂಚದಲ್ಲಿಯಯುದ್ಧ ದೇವತೆಗಳೆಲ್ಲ ಸಾಮನ್ಯವಾಗಿ ಪುರುಷರೇ. ವ್ಯವಸಾಯ ದೇವತೆಗಳು ಸ್ತ್ರೀಯರು.ವ್ಯವಸಾಯ ಪ್ರಧಾನವೃತ್ತಿಯಾಗಿದ್ದದ್ರಾವಿಡರಲ್ಲಿ ಹೆಚ್ಚಾಗಿ ಸ್ತ್ರೀಯರೇ ಇದ್ದುದರಿಂದ ಗ್ರಾಮದೇವತೆಗಳೆಲ್ಲ ಸ್ತ್ರೀಯರೇ ಎಂಬುದುಇವರವಾದ.ಒಟ್ಟಿನಲ್ಲಿ ಸ್ತ್ರೀ ಶಕ್ತಿಸ್ವರೂಪಿಣಿಎಂದು ಭಾವಿಸಿ ಗ್ರಾಮೀಣರು ಆರಾಧಿಸಿದರು,ಆರಾಧಿಸುತ್ತಿದ್ದಾರೆ. ನಾಗರಿಕತೆ ಸ್ವಲ್ಪಮಟ್ಟಿಗೆ ಪ್ರಬಲವದರೂ ಗ್ರಾಮದೇವತೆಗಳ

ಸ್ಥಾನದಲ್ಲಿದ್ದ ಶಕ್ತಿಗಳನ್ನು ಶಿವನ ಹೆಂಡತಿಯಾದ ಪಾರ್ವತಿಯೊಂದಿಗೆ ಹೋಲಿಸಿ,ಸಮೀಕರಿಸಿ, ಆದಿಶಕ್ತಿ ಸ್ವರೂಪವಾಗಿಆರಾಧಿಸುವ ಸಂಪ್ರದಾಯ ಮುಂದುವರಿಯುತ್ತಿದೆ.

ಜನಪದ ಹೆಣ್ಣು ದೇವರುಗಳು ಹೇರಳವಾಗಿ ಇದ್ದವು ಅವುಗಳಲ್ಲಿ ಎಲ್ಲಾಬಗೆಯಜನರಿಂದ ಸ್ವೀಕರಿಸುವ ನಿಟ್ಟಿನಲ್ಲಿಉಚ್ಚಾಸ್ಥಾನದಲ್ಲಿ ವಂದಿಸಿ ಆರಾಧಿಸುವದೇವರುಎಂದರೆಅದು ಮಾರಿಯಮ್ಮನೆಯಾಗುತ್ತದೆ. ಇದು ಸ್ಥಾಪಿತವಾದಜನಪದ ಭಾಗದಅನುಷ್ಠಾನದ ಸತ್ಯ ಸಂಗತಿಯಾಗಿದೆ.ನಿರ್ದಿಷ್ಟಜನರಅಮ್ಮ ಎಂಬ ಖಾಯಿಲೆಯಿಂದಕಾಪಡಿ ಬಿಸಿಲುನ ಬಿಸಿ ಧಗೆತೇಗೆದುಕೊಂಡು ಮಳೆಯನ್ನು ನೀಡುವಳು ಎಂಬ ನಂಬಿಕೆ ಅಂದಿನ ಜನಪದರಲ್ಲಿ ಮಾತ್ರವಲ್ಲ ಇಂದಿನ ಜನರಲ್ಲಿರೂಢಿಯಲ್ಲಿರುವುದು ನೋಡಬಹುದು.

**ಇತಿಹಾಸ ಐತಿಹ್ಯ**

ತಮಿಳುನಾಡಿನಲ್ಲ ಇಂದಿಗು ವೈಭವದೊಂದಿಗೆಆರಾಧಿಸುತ್ತ ಬಂದಿರುವಜನಪದ ಹೆಣ್ಣು ದೇವರುಗಳ ಕಾಲವು 2000 ವರ್ಷಗಳಷ್ಟ ಹಳೆಯದಾಗಿದೆ. ಇತಿಹಾಸಇರುವ ತಮಿಳು ಸಾಹಿತ್ಯದಲ್ಲಿ ಹೇರಳವಾಗಿ ನೋಡಸಿಗುವ ಸಂಘಂ ಸಾಹಿತ್ಯದಲ್ಲಿಕೊಟ್ರವ್ವೈ, ಅಯ್ಯಯ್ಯ್,ಅಮರಿ,ಕುಮರಿ, ಗೌರಿ, ಸಮರಿ,ಸೂಲಿ, ನೀಲಿ, ಕನ್ನಿ,ನಲ್ಲಾಳ್, ಸಂಗರಿ ಎಂಬ ಹೆಣ್ಣು ದೇವತೆಗಳು ಕುರಿತ ಉಲ್ಲೇಖಗಳು ನೋಡಸಿಗುತ್ತದೆ. ಈ ಸಾಲಿನಲ್ಲಿಗ್ರಾಮೀಣ ಭಾಗದಜನರಲ್ಲಿ ಪ್ರಧಾನವಾಗಿಕುಮರಿಎನ್ನುವದೇವರುಕನ್ಯಾಯಾಗಿ (ಕುಮರಿ) ಭಾರತದದಕ್ಷಿಣ ಭಾಗದಲ್ಲಿಆರಾಧಿಸುವ ಪದ್ಧತಿಯನ್ನು ಹೊಂದಿದ್ದಾರೆ. ಆದ್ದರಿಂದ ಇಲ್ಲಿರುವ ಒಂದು ಸ್ಥಳವಾದ ಕನ್ಯಾಕುಮರಿ ಎಂಬ ಸ್ಥಳದಲ್ಲಿ ಮುಕ್ತಿ ಅಪೇಕ್ಷೆ ಇರುವರು ಇಲ್ಲಿ ಬಂದುಧ್ಯಾನಸಕ್ತರಾಗುವರು ಎಂಬುದು. ಪೆರಿಪ್ಲಸ್ ಗ್ರಂಥದಿಂದ ತಿಳಿಯಲಾಗುತ್ತದೆ.ಇದರ ಜತೆಯಲ್ಲಿ ಕೋಟ್ರವೈ ಎಂಬ ಹೆಣ್ಣುದೇವತೆಯನ್ನು ಇತಿಹಾಸವನ್ನು ನೋಡುವ ಸಂದರ್ಭದಲ್ಲಿ ಪೂರ್ವಜರಿಂದ ತಿಳದುಬರುವಂತೆ ಜನಪದದೇವರು ಬಹುತೇಕ ಒಂದು ಊರಿಗೆ ಸಂಬಂಧಿಸಿದ್ದು. ಒಂದು ಕುಲಕ್ಕೆ ಸಂಭಂದಿಸಿದ್ದು ಒಂದು ಸ್ಥಳಕ್ಕೆ ಸೇರಿದ್ದು ಎಂಬ ಅರ್ಥದಿಂದಒಂದು ನೆಲವನ್ನು ಸೂಚಿಸುವ ಸಂಪ್ರಾದಾಯವನ್ನು ಪ್ರತಿನಿಧಿಸುವುದು ಎಂಬ ವಿಷಯ ಪ್ರಾಚೀನ ತಮಿಳು ಗ್ರಂಥವಾದ ತೋಲ್ಕಾಪ್ಪಿಯದಲ್ಲಿ ಉಲ್ಲೇಖವಿದೆ. ಸಿಲಪ್ಪದಿಕಾರದಲ್ಲಿ ಅರೆಯಾಣಿಅಯ್ಯಯ್, ಕುಮರಿ, ಆಪಯಾ, ಅಂತರಿ, ಪಿರಾಟ್ಟಿ, ಪಿಡಾರಿ, ಮಾಯವಳ್, ಕೊಟ್ರವೈ ಮುಂತಾದಜನಪದ ಹೆಣ್ಣು ದೇವತೆಗಳ ಕುರಿತು ವಿವರಗಳನ್ನು ನೀಡುತ್ತದೆ. ಕೊಟ್ರವೈ ಪಾಲೈ ಎಂಬ ಭೂಮಿಯ ದೇವರುಗಳಂತೆ, ಅಯ್ಯ, ಕುಮರಿಎಂಬುದು ಮರಾವರು ಕುಲಕ್ಕೆ ಸೇರಿದ್ದು ಎಂಬುಗಿ ಆಚರಣೆಯಲ್ಲಿದೆ. ಶಿಲಾಪ್ಪದಿಕರದಲ್ಲಿ ಕಟ್ರವೈ ಎಂಬ ದೇವತೆಯು ಗೆಲುವಿನ ದೇವತೆಎಂದು ಪೂಜಿಸಿ ಆರಾಧಿಸಿ ರಕ್ತ ಮತ್ತುಅಕ್ಕಿಯಂತಎಡೆಯನ್ನುಅರ್ಪಿಸುತ್ತಿದ್ದ ಮಾಹಿತಿಗಳು ತಿಳದು ಬರುತ್ತದೆ. ಕೊಟ್ರವೈ ಎಂಬ ದೇವತೆಯುಕಲಾರೂಪದ ವಿನ್ಯಾಸವು ಸುಂದರ ಸುಸ್ತಿರವಾದ ಕೆಂಪುವರ್ಣದತಲೆಯುಜಿಂಕೆಯನ್ನು ವಾಹನವಾಗಿ ಹೊಂದಿರುವವಳು ಎಂಬುದು ಶಿಲಪ್ಪದಿಗರಕಾವ್ಯದಿಂದ ತಿಳದುಬರುತ್ತದೆ. ಶಿಲಪ್ಪದಿಗರವುನೀಡುವ ಮಾಹಿತಿಯಂತೆಕೊಟ್ರವೈಕುರುತೋಗೈಎಂಬುದನ್ನುಆಧಾರಿಸಿ ಸೂಲಿ ( ಸೂಲಾಯುದವನ್ನು ಕೈಯಲ್ಲಿ ಇಡಿದವಳಾಗಿದ್ದಳು ಎಂದು ವರ್ಣನೆಯು ದೊರೆಯುತ್ತದೆ. ಕೋಟ್ರವೆ ಎಂಬ ದೇವತೆಯ ವೈಶಿಷ್ಟತೆಯನ್ನು ಸಾರುವ ಶಿಲಪ್ಪದಿಗಾರಂಕೆತ್ತನೆಯ ಸಾಲಿನಲಿ ್ಲಎಮ್ಮೆಯ ತಲೆಮೇಲೆ ನಿಂತಿರುವರೂಪಾ ಲಾವಣ್ಯವನ್ನುಯತಾರೂಪವನ್ನು ವಿವರಿಸುತ್ತದೆ.

ಶಿಲಪ್ಪದಿಗರಂ ಜತೆಯಲಿ ್ಲಇರುವಎರಡು ಮಹಾಕಾವ್ಯಗಳಲ್ಲಿ ಮೂಡಿಬಂದಿರುವಕಡಲ ಕಾವಲು ದೇವರಾಗಿ ಮಣಿಮೇಘಲೈ ಎಂಬ ದೇವರ ಪೂಜಿಸಾಲಾಗುತ್ತಿತ್ತು. ಇದರಜತೆಯಲ್ಲಿ ಸಿಂದದೇವಿ ಎಂಬ ಹೆಣ್ಣುದೇವಿಯನ್ನುಆರಾಧನೆಯ ವಿಷಯವು ತಿಳದುಬರುತ್ತದೆ. ಈ ಹೆಣ್ಣುದೇವರೆ ಆ ಪುತ್ರನಿಗೆಎಂದು ಬರಿದಾಗದಿರುವಅಕ್ಷಯ ಪಾತ್ರೆಯನ್ನು ವರವಾಗಿ ನೀಡಿತ್ತು, ಅರಣ್ಯಬದಿಯಲ್ಲಿದೇವಾಲಯದಲ್ಲಿ ಸ್ಥಾಪಿತವಾಗಿರುವಕಾಡಮಾರ್ ಸೆಲ್ವಿ ಎಂಬ ದೇವತೆಯಕುರಿತು ವಿವರಿಸುತ್ತದೆ.

ಇವುಗಳನ್ನು ಒಳಗೊಂಡಿರುವ ಇತಿಹಾಸಇದನ್ನ ಹಿಂಬಾಲಿಸುತ್ತಆರಂಭವಾದಜನಪದ ಹೆಣ್ಣು ದೇವತೆಗಳ ಪೂಜಾ ಆಚಾರಣೆಗಳಾಗಿದೆ. ಆ ಹೆಣ್ಣು ದೇವತೆಗಳಿಗೂ ಒಂದುಕಥೆಯನ್ನು ಹಿನ್ನೆಲೆಯಾಗಿ ಉಳ್ಳಾವಾಗಿದ್ದವು.ಅನೇಕ ಜನಪದ ದೆವರುಗಳು ಇದ್ದರು ಬಹುತೇಕಎಲ್ಲಾಬಗೆಯ ಜನರುಗಳಿಂದಲು ಆರಾಧಿಸುವಂತ ಮಾರಿಯಮ್ಮ, ಕಾಳಿಯಮ್ಮ ಮತ್ತು ಕೇಲವು ಹೆಣ್ಣು ದೇವತೆಗಳ ಮಹಿಮೆಯಕಥೆಯನ್ನು ಆಧರಿಸಿ ನೋಡಬೇಕಾಗಿರುವ ದೇವತೆಗಳಾಗಿವೆ.

ಮಾರಿಯಮ್ಮನ ಉಗಮ ಕುರಿತು ತಮಿಳು ಜನಪದ ಕಥೆಗಳಲ್ಲಿ ವಿಭಿನ್ನಾ ಕತೆಗಳನ್ನು ಒಳಗೊಂಡಿದೆ,. ಬ್ರಾಹ್ಮಣ ಕುಲಕ್ಕೆ ಸೇರಿದ ಸುಂದರ ಕನ್ಯಾಒಬ್ಬಳನ್ನು ಕೆಳವರ್ಗದ ಯುವಕನೊರ್ವನುತನ್ನನ್ನುಉನ್ನತ ವರ್ಗದವನುಎಂದು ಸುಳ್ಳು ಹೇಳಿ ಮದುವೆ ಮಾಡಿಕೊಂಡು. ಮದುವೆ ನಂತರ ಆ ಹೆಣ್ಣುತನ್ನಗಂಡ ಕೆಳವರ್ಗದವನು ಎಂಬ ಸತ್ಯ ತಿಳದು ಆ ಹೆಣ್ಣು ಆತ್ಮಹತ್ಯಮಾಡಿಕೋಳ್ಳುತ್ತಳೆ.ಆತ್ಮಹತ್ಯ ಮಾಡಿಕೊಂಡ ಆ ಹೆಣ್ಣುರೂಪ ಬದಲಿಸಿಕೊಂಡು ದೇವರೂಪವನ್ನು ಪಡೆದುಕೊಂಡದಂಡನೆಯನ್ನು ನೀಡಿದಕಾರಣದಿಂದ ಮಾರಿಯಮ್ಮ ಎಂಬ ಹೆಸರು ಬಂದಿರುವುದಾಗಿ ಕಥೆಯಲ್ಲಿ ಉಲ್ಲೇಖಗಳನ್ನು ನೋಡಬಹುದು.ತಮಿಳನಲ್ಲಿ ಮಾರಿಎಂದರೆ ಬದಲಿ ರೂಪಎಂದುಅರ್ಥವನ್ನು ನೀಡುವುದರಿಂದತನ್ನನ್ನು ಮೋಸ ಮಾಡಿದವವನನ್ನುದ್ವೇಶತಿರಿಸಲುರೂಪ ಪಡೆದದೇವತೆಯ ಮಾರಿ ಎಂಬ ಅರ್ಥವನ್ನು ಈ ತಮಿಳು ಕಥೆಯಲ್ಲಿ ನೋಡಬಹುದು.

ಭಕ್ತಿ ಚಿಂತನೆಯಲ್ಲಿ ವಿನಯದಿಂದ ವಿಧೆಯಳಾದ ಪತಿವ್ರತೆ ಹೆಣ್ಣೋಬ್ಬಳುಗೆ ಮುನಿಯೊಂದಿಗೆ ವಿವಾಹವಾಯ್ತು ತನ್ನ ಪತಿವ್ರತಿಯ ಧರ್ಮದಿಂದ ಅನೇಕ ಅದ್ಭುತವನ್ನು ನಡೆಸುತ್ತಿದ್ದ ಕಾಲದಲ್ಲಿ ಪತಿವ್ರತೆ ಧರ್ಮದಿಂದ ವಿಚಲಿತವಾಗುವಂತ ಸುಂದರವಾದ ಯಕ್ಷರುಗಳ ದೃಶ್ಯವನ್ನುಕಂಡು ಮನಸೋತಳು ಇದನ್ನುಅರಿತ ಪತಿರಾಯನುತನ್ನ ಮಗನನ್ನುಕರೆದುತನ್ನಧರ್ಮಪತ್ನಿಯ ಶಿರವನ್ನು ಛೇಧಿಸುವಂತೆಆಜ್ಞೆ ಮಾಡಲು ಮಗನು ಶಿರಸಾ ನೇರವೆರಿಸಿದನು ತನ್ನತಾಯಿಯ ಶಿರವನ್ನು ಛೇದಿಸಿದನು. ಕಾರ್ಯವನ್ನು ಮುಗಿಸಿದ ಮಗನು ತನ್ನತಂದೆಯ ಬಳಿ ತಾಯಿಯನ್ನು ಬದುಕಿಸಿ ಕೊಡುವಂತೆ ಕೇಳಿಕೊಂಡನು ಅದಕ್ಕೆಅವರತಂದೆತಥಾಸ್ತು ಎಂದು ಹೇಳಲು ಅವಳ ತಲೆಯನ್ನು ಮತ್ತೆ ಕೆಳವರ್ಗದ ಸ್ತ್ರೀಯ ದೇಹವನ್ನು ಸೇರಿಜೀವಿಸುವಂತಾಯಿತು ಈ ಹೆಣ್ಣೆ ಮಾರಿಯಮ್ಮಎಂದು ಹೇಳುವವರು ಇದ್ದಾರೆ. ( ಈಕಥೆಯ ಪಾತ್ರಗಳು ಹಿಂದು ಸಂದರ್ಭ ಕಥೆಗಳಲ್ಲಿ ಒಂದಾದಜಮದಾಗ್ನಿ ಮುನಿಗಳು, ರೇಣುಕಾಎಲ್ಲಮ್ಮನಕಥೆಯನ್ನು ಮತ್ತು ಪರುಶುರಾಮ ಹೋಲಿಕೆಯಾಗುವಂತ ಪಾತ್ರಗಳಾಗಿದೆ. ) ಇಲ್ಲಿ ಗಮನಿಸುವ ಅಂಶ ಎಂದರೆ ಮೇಲು ಜಾತಿ ಮತ್ತು ಕೆಳಜಾತಿಯ ಹೊಂದಾಣಿಕೆಯನ್ನುಏರ್ಪಡಿಸುವಕಥೆಯುಇಲ್ಲಿ ಗಮನಿಸಬಹುದು.

ಜನಪದರ ಹೆಣ್ಣು ದೇವತೆಗಳ ಸಾಲಿನಲ್ಲಿ ಮಾರಿಯಮ್ಮನುಗಡಿಯನ್ನುಕಾಯುವ ಕಾವಲು ದೇವತೆಯಾಗಿಯು, ಹೊಟ್ಟೆಕಾಯಿಲೆಯನ್ನುತಿರಿಸುವ ಹೆಣ್ಣುದೇವತೆಯು ಕಾಳಿ ಎಂಬ ಹೆಸರು ಉಳ್ಳವಳಾಗಿದ್ದಾಳೆ ಎಂಬುದುಒಂದು ಸಂದರ್ಭದ ಪುರಣಕಥೆಯಿಂದ

ತಿಳಿದುಬರುತ್ತದೆ. ಶಿವನಿಗೂ ಕಾಳಿಗೂ ನಾಟ್ಯದಲ್ಲಿ ಪಂದ್ಯ ನಡೆಸುವಾಗ ಕಾಳಿಯು ಸೊತದಾಗಿಯುಅದರಿಂದ ಕಾಳಿಯನ್ನು ಊರಿನ ಹೊರವಲಯದಲ್ಲಿ ಕಾವಲು ಕಾರ್ಯವನ್ನು ನಿರ್ವಯಿಸಲು ಕಟ್ಟಳೆಯನ್ನು ಮಾಡಿದನುಎಂಬುದುರೂಢಿಯಲ್ಲಿದೆ, (ಆದ್ದರಿಂದಊರಿನಗಡಿಯಲ್ಲಿ ಗಡಿಕಾಳಿಯಾಗಿದ್ದಾಳೆ) ಈ ರೀತಿಯ ಹಿನ್ನೆಲೆಯುಳ್ಳ ಹೆಣ್ಣು ದೆವರುಗಳ ಸಾಲಿನಲ್ಲಿ ಸಾಮನ್ಯಗೃಹಿಣಿಯಾಗಿಕುಟುಂಬ ಜೀವಿತವನ್ನು ನಡೆಸಿ ಸಂದರ್ಭ ಸನ್ನಿವೇಶಗಳಿಂದ ದೆವತೆಗಳ ಪದವಿಯನ್ನು ಹೊಂದಿರುವ ಸಾಲಿನಲ್ಲಿಕಣ್ಣಗಿ. ನೀಲಿ ಮುಂತಾದ ಹೆಣ್ಣು ದೇವರುಗಳನ್ನು ಗುರುತಿಸಬಹುದು.

ಮಾರಿಯಮ್ಮನ್, ಕಾಳಿಯಮ್ಮನ್, ಅಂಗಾಳಮ್ಮನ್, ಪಿಡಾರಿ, ದ್ರೌಪದಿ(ಮಗಾಭಾರತದ ನಾಯಕಿ), ಚಾಮುಂಡಾ ಅಷ್ಟಕನ್ನಿಕಳ್, ಎಲ್ಲೈಮ್ಮನ್, 116 ಜನಪದ ದೆವರುಗಳು ಆರಾಧನೆಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದವಾಗಿದೆ. ಎಲ್ಲಾದೇವತೆಯ ವಿವರಣೆಇಲ್ಲಿ ನೀಡಾಲಾಗಿಲ್ಲ. ಇಲ್ಲಿ ಮೇಲು ಕೀಳು ಎಂಬ ಯಾವುದೇ ಭೇದ ವಿಲ್ಲದೆಆರಾಧಿಸುವ ಕೆಲವು ದೇವರುಗಳನ್ನು ನೋಡಿದರು.ಇನ್ನೂ ಕೆಲವು ಸಮುದಾಯದಲ್ಲಿಜಾತಿ ಸಂಘರ್ಷಗಳ ಹೊಳಸೂಕ್ಷ್ಮತೆಯನ್ನು ಉಳ್ಳವಾಗಿರುತ್ತದೆ.

**ಆಚರಣೆ ವಿಧಿಗಳು**

ಜನಪದ ದೆವರು ಆಚರಣೆಯು ನಾಗರಿಕ ಜೀವನದೊಂದಿಗೆ ಆರಂಭವಾದುದ್ದರಿಂದ ಇದನ್ನು ಸಂಭ್ರಮಚರಣೆಯ ಭಾಗದಂತೆ ಸಡಗರದಿಂದ ಆಡು, ಕೋಳಿ ಮುಂತಾದವಗಳ ಬಲಿ ಕೊಡುವುದರ ಮೂಲಕ ಪರಂಪರಿಕ ಆಚರಣೆ ಆರಂಭವಾಗುತ್ತದೆ. ಈ ಆಚರಣೆಗಳಲ್ಲಿ ಸಾಮನ್ಯ ನಿರ್ದಿಷ್ಟ ನಿಲುವುಗಳನ್ನು ತಿಳಿಸುವುದು ಸಾಧ್ಯವಾಗುವುದಿಲ್ಲ. ಮಾರಿಯಮ್ಮನ ಆಚರಣೆಯಲ್ಲಿ ಕರಗವನ್ನು ಒತ್ತು ಬೆಂಕಿ ತುಳಿಯುವ ಪದ್ದತಿಯು ತಮಿಳುನಾಡಿನಲ್ಲಿ ಇಂದಿಗೂ ಪ್ರಚಾರದಲ್ಲಿದೆ. ಮೇಲೆ ಹೆಸರಿಸಿದ ಜನಪದ ದೈವಗಳು ಮತ್ತು ಆಚರಣೆಗಳು,ಜನಪದರ ಜೀವನದ ಅವಿಭಾಜ್ಯ ಭಾಗವಾಗಿ ಹೋಗಿವೆ. ಇವುಗಳಲ್ಲಿ ಕೆಲವು ಸಂತೋಷಕ್ಕಾಗಿ ಹುಟ್ಟಿಕೊಂಡರೂ ಉಳಿದ ಕೆಲವು ಕೇವಲ ಮೂಢನಂಬಿಕೆಗಳಿಗೆ, ಮೂಢಾಚಾರಗಳಿಗೆ ನಿಲಯವಾಗಿವೆ,ಇಂತಹ ಜನಪದ ಆಚರಣೆಗಳು ನಂಬಿಕೆಗಳು ಪ್ರಾಚೀನ ಕಾಲದಿಂದಲೂ ಇರುವಂಥವಾಗಿದೆ.

ಪ್ರಪಂಚದ ಎಲ್ಲ ದೇಶಗಳಲ್ಲೂ ನಂಬಿಕೆಗಳಿವೆ. ಅವು ವ್ಯವಸ್ಥಿತ ರೂಪ ಪಡೆದು ಮತ, ದೇವತಾಗಣ, ಸ್ತುತಿ ವಿಧಾನಗಳು, ಕರ್ಮಾಚರಣೆಗಳು, ನಂಬಿಕೆಗಳು, ವಿವಿಧ ಬಗೆಯ ಪೂಜೆಗಳು, ಮಂತ್ರತಂತ್ರಗಳು-ಇವೆಲ್ಲ ಉಗಮಗೊಂಡಿವೆ. ಇವುಗಳಲ್ಲಿರುವ ಮೌಢ್ಯದ ಭಾಗ ಸ್ವಲ್ಪಕಡಿಮೆಯಾಗಿಎಲ್ಲರೂ ಸಂತೋಷವಾಗಿ ಆಚರಿಸುವ ಆಚರಣೆಯಾಗಿ ಅವತರಿಸದುವು. ಮತ ಸಂಬಂಧವಾದ ಕರ್ಮಾಚರಣೆಗಳು ಒಂದೆಡೆ,ಲೌಕಿಕ ಸಂಬಂಧ ಹೆಚ್ಚಾಗಿರುವ ಆಚರಣೆಗಳು ಮತ್ತೊಂದುಕಡೆ. ಇವೆರಡರ ಮಧ್ಯೆಜಾತ್ರೆಗಳು,ವ್ರತಗಳು,ಮೊದಲಾದ ಸಾಮಾಜಿಕ ಆಚರಣೆಗಳು ಬರುತ್ತವೆ, ಇವೆಲ್ಲ ನಂಬಿಕೆಗಳ ಮೂಲ ಧನವಾಗಿ ಮೂಲಶಕ್ತಿಯಾಗಿರುವ ಆಚರಣೆಗಳೇ. ಸಮಾಜದಲ್ಲಿಯ ಅನೇಕ ವ್ಯಕ್ತಗಳು ಒಂದೆಡೆ ಸೇರಿದರೇನೇ ಹಬ್ಬಗಳು ಆಚರಣೆ ಮೊದಲಾದವೆಲ್ಲ ಸ್ಥಾನ ಪಡೆಯುತ್ತವೆ. ಮಾನವನ ಸಾಂಸ್ಕೃತಿಕ ವಿಕಾಸದಲ್ಲಿ ನಂಬಿಕೆ, ಹಬ್ಬಗಳು,ಆಚರಣೆಗಳು ಮೊದಲಾದವು ವಹಿಸಿದ ಪಾತ್ರಗಳನ್ನು ಮರೆಯುವಂತಿಲ್ಲ.

**ಪರಾಮರ್ಶನಾ ಗ್ರಂಥಗಳು**

1. ಎಂ.ಸಿ.ಪಿ. ಶ್ರೀವಾತ್ಸವ, ಮದರ್‌ಗಾಡ್ಸಸ್ಇನ್‌ಇಂಡಿಯನ್‌ಅರ್ಟ್, ಆರ್ಕಿಯೊಲಾಜಿಅಂಡ್ ಆಟ್ರೆಚರ್, ದೆಲ್ಲಿ, 1979, ಪು.20-31.
2. ನೆಲ್ಲೈ ಮಾವಟ್ಟ್ ನಾಟ್ಟು ಪುರ ದೈವಂಗಳ್. ತುಳಸಿರಾಮ ಸಾಮಿ. ಇಟರನ್ಯಾಷನಲ್‌ಇನ್ಸಟೂಟ್‌ಆಫ್ ತಮಿಳ ಸ್ಟಡಿಸ್.1985
3. ತೆಲುಗುಜಾನಪದ.ಡಾಆರ್ವಿಯಸ್ ಸುಂದರಂ.ವಿಸ್ತರಣೆ ಹಾಗೂ ಸಲಹಾ ಕೇಂದ್ರಕರ್ನಾಟಕಜಾನಪದ ವಿಶ್ವವಿದ್ಯಾಲಯ.2015
4. ತಮಿಳ್ ನಾಟ್ಟುಪುರ ವಿಯಲ್ ಅಯ್ವುಗಳ್ ಅರಿವುಡೈನಂಬಿ ಮ.ಸಾ.ನ್ಯೂ ಸೆಂಚುರಿ ಬುಕ್ ಹೌಸ್
5. ಶಿಲಪ್ಪದಿಕಾರಂ, ಪು. 22-29